# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1018 (1062)

ಸದಸ್ಯರ ಹೆಸರು : ಡಾ. ಯತೀಂದ್ರ ಎಸ್. (ವಿಧಾನ ಸಭಾ ಕ್ಷೇತ್ರ)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು.

ಉತ್ತರಿಸಬೇಕಾದ ದಿನಾಂಕ : 16.12.2025

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಹಾಪ್ ಕಾಮ್ಸ್ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆ ಸದೃಡಗೊಳಿಸಲು ಸರ್ಕಾರ ಕೈಗೊಂಡಿರುವ ನಿರ್ದಿಷ್ಟ ಯೋಜನೆಗಳೇನು: ಆನ್ ಲೈನ್ ಮಾರಾಟ, ಡಿಜಿಟಲ್ ಪಾವತಿಯಲ್ಲಿ ಪಾರದರ್ಶಕತೆ ತರಲು ಮತ್ತು ದಕ್ಷತೆ ಹೆಚ್ಚಿಸಲು ಯಾವ ರೀತಿಯ ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. | ಹಾಪ್ ಕಾಮ್ಸ್ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆ ಸದೃಡಗೊಳಿಸಲು ತೋಟಗಾರಿಕೆ ಇಲಾಖೆಯಿಂದ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.<br><br>1. ಕರ್ನಾಟಕ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾಮಂಡಳ (ನಿ) ಬೆಂಗಳೂರು, ಸಂಸ್ಥೆಯನ್ನು 1996 ರಲ್ಲಿ ಸ್ಥಾಪಿಸಿದ್ದು, ರಾಜ್ಯಮಟ್ಟದ ಈ ಸಂಸ್ಥೆಯಡಿ ಬೆಂಗಳೂರು ಹಾಪ್ ಕಾಮ್ಸ್ ಒಳಗೊಂಡಂತೆ 24 ಜಿಲ್ಲಾ ಹಾಪ್‌ಕಾಮ್ಸ್‌ಗಳು ಕಾರ್ಯ ನಿರ್ವಹಿಸುತ್ತಿವೆ.<br><br>2. ಮೂಲಭೂತ ಸೌಕರ್ಯಗಳಾದ ಹಣ್ಣು ಮತ್ತು ತರಕಾರಿಗಳನ್ನು ಮಾರಾಟ ಮಾಡಲು ಮಾರಾಟ ಮಳಿಗೆಗಳು, ಸಂಗ್ರಹಣಾ ಕೇಂದ್ರ, ಶೀಥಲಗೃಹ, ಹಣ್ಣು ಮಾಗಿಸುವ ಘಟಕ, ಪ್ಯಾಕ್ ಹೌಸ್, ಈರುಳ್ಳಿ ಶೇಖರಣಾ ಘಟಕಗಳ ನಿರ್ಮಾಣಕ್ಕಾಗಿ, ನಿಖರ ತೂಕ ಹಾಗೂ ಬಿಲ್ಲಿಂಗ್ ವ್ಯವಸ್ಥೆಗಾಗಿ ಸ್ಮಾರ್ಟ್ ಬಿಲ್ಲಿಂಗ್ ಮಿಷನ್‌ಗಳ, ಮೊಬೈಲ್ ವ್ಯಾನುಗಳ/ಸಾಗಣೆ ವಾಹನಗಳ ಖರೀದಿ ಇತ್ಯಾದಿ ಘಟಕಗಳಿಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಅನುದಾನವನ್ನು ಜಿಲ್ಲಾ ಹಾಪ್ ಕಾಮ್ಸ್‌ಗಳಿಗೆ ಒದಗಿಸಲಾಗಿರುತ್ತದೆ.<br><br>3. 2025-26ನೇ ಸಾಲಿನಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆಯಡಿ ಜಿಲ್ಲಾ ಹಾಪ್ ಕಾಮ್ಸ್ ಗಳಿಂದ ಮಾರಾಟ ಮಳಿಗೆ/ಕಿಯೋಸ್ಕ್ ಮಳಿಗೆಗಳ ನಿರ್ಮಾಣ/ನವೀಕರಣ/ಒಳವಿನ್ಯಾಸ/ನಿರ್ವಹಣೆ/ PHM ಮತ್ತು ಸಂಸ್ಕರಣೆ/ಹಣ್ಣು ಮಾಗಿಸುವ ಘಟಕ/ಸಂಗ್ರಹಣಾ ಕೇಂದ್ರದ ನವೀಕರಣ/ದುರಸ್ಥಿ, ಯಂತ್ರೋಪಕರಣಗಳ ಖರೀದಿ ಇತ್ಯಾದಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br>4. ಹಣ್ಣು ಮತ್ತು ತರಕಾರಿಗಳನ್ನು ಸರಬರಾಜು ಮಾಡಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯಿದೆ – 1999 ಹಾಗೂ 2000 ಕಲಂ-4(ಜಿ) ಅಡಿಯಲ್ಲಿ ಜಿಲ್ಲಾ ಹಾಪ್‌ಕಾಮ್ಸ್ ಹಾಗೂ ಕೆ.ಹೆಚ್.ಎಫ್. ಸಂಸ್ಥೆಗೆ ಅಧಿಸೂಚನೆ ಸಂಖ್ಯೆ: ಆಇ/885/ವೆಚ್ಚ-12/2025 ದಿನಾಂಕ:23.10.2025 ರನ್ವಯ ಸರ್ಕಾರದಿಂದ 4ಜಿ ವಿನಾಯಿತಿ |

| | | |
|---|---|---|
| | | ದೊರಕಿದ್ದು, ರಾಜ್ಯದಲ್ಲಿನ ಸರ್ಕಾರಿ ಸ್ವಾಮ್ಯದ ಇಲಾಖೆ/ಏಜೆನ್ಸಿಗಳಿಗೆ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ಕೇಂದ್ರ ಕಾರಾಗೃಹ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ವಸತಿ ನಿಲಯಗಳಿಗೆ, ವಸತಿ ಶಾಲೆಗಳಿಗೆ, ಆಶ್ರಮ ಶಾಲೆಗಳಿಗೆ, ಮೊರಾರ್ಜಿ ದೇಸಾಯಿ ವಸತಿ ನಿಲಯಗಳಿಗೆ ಮತ್ತು ಜಿಲ್ಲಾ ಆಸ್ಪತ್ರೆಯ ಒಳರೋಗಿಗಳಿಗೆ, ಸರ್ಕಾರದ ಅಧೀನದಲ್ಲಿ ಬರುವ ವಿದ್ಯಾರ್ಥಿ ನಿಲಯಗಳಿಗೆ, ಆಸ್ಪತ್ರೆಗಳಿಗೆ ಇತ್ಯಾದಿ) ವಿವಿಧ ಜಿಲ್ಲಾ ಹಾಪ್ ಕಾಮ್ಸ್ ಗಳ ಮುಖೇನ ಹಣ್ಣು ಮತ್ತು ತರಕಾರಿಗಳನ್ನು ಪೂರೈಸುತ್ತಿದ್ದು, ಹಾಪ್ ಕಾಮ್ಸ್ ಗಳ ಲಾಭದಾಯಕತೆ ಮತ್ತು ಆರ್ಥಿಕ ಸುಧಾರಣೆಗೆ ಸಹಾಯಕವಾಗಿರುತ್ತದೆ.<br>5. ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯ ವಹಿವಾಟಿನ ಅಭಿವೃದ್ಧಿಗಾಗಿ ಸರ್ಕಾರದಿಂದ 2024-25 ನೇ ಸಾಲಿನಲ್ಲಿ ಶೇ. 10.50 ಬಡ್ಡಿಯ ರೂಪದಲ್ಲಿ ರೂ. 15 ಕೋಟಿಗಳ ದುಡಿಯುವ ಬಂಡವಾಳ ಸಾಲ ಪಡೆದು ವಹಿವಾಟಿನ ಅಭಿವೃದ್ಧಿಗೆ ಕ್ರಮ ವಹಿಸಲಾಗುತ್ತಿದೆ.<br>6. ಆನ್ ಲೈನ್ ಮಾರಾಟ, ಡಿಜಿಟಲ್ ಪಾವತಿ: ಬೆಂಗಳೂರು, ದಕ್ಷಿಣ ಕನ್ನಡ ಮತ್ತು ಉಡುಪಿ ಇತ್ಯಾದಿ ಜಿಲ್ಲಾ ಹಾಪ್ ಕಾಮ್ಸ್ ಸಂಸ್ಥೆಯ ಮಾರಾಟ ಮಳಿಗೆಗಳಲ್ಲಿ ಆನ್ ಲೈನ್ ಮಾರಾಟ ವ್ಯವಸ್ಥೆ ಇದ್ದು, ಗ್ರಾಹಕರ ಬೇಡಿಕೆಯಂತೆ ಆನ್ ಲೈನ್ ಮೂಲಕ ಹಣ್ಣು-ತರಕಾರಿಗಳನ್ನು ಪೂರೈಕೆ ಮಾಡಲಾಗುತ್ತಿದೆ. ಖರೀದಿ-ಮಾರಾಟ ಪ್ರಕ್ರಿಯೆಗಳನ್ನು ಆಟೋಮೇಷನ್ ತಂತ್ರಜ್ಞಾನವನ್ನು ಬಳಸಿ ವ್ಯವಹರಿಸಲಾಗುತ್ತಿದೆ. ಅಂದರೆ, ಸಂಸ್ಥೆಯು ನಿಗಧಿ ಪಡಿಸಿದ ದರಗಳನ್ನು ತೂಕದ ಮಾಪನ ಯಂತ್ರ (ಸ್ಕೇಲ್) ಗಳಿಗೆ ಪ್ರತಿದಿನ ಆರೋಹಣೆ (upload) ಮಾಡಲಾಗುವುದು. ಇದರೊಂದಿಗೆ ಆನ್ ಲೈನ್ ಬಿಲ್ಲಿಂಗ್ ವ್ಯವಸ್ಥೆ ಜಾರಿಯಲ್ಲಿದ್ದು, ಫೋನ್ ಪೇ, ಗೂಗಲ್ ಪೇ, QR ಕೋಡ್, RTGS ನಂತಹ ಡಿಜಿಟಲ್ ಪಾವತಿಗಳನ್ನು ಅಳವಡಿಸಿದೆ. ಗ್ರಾಹಕರು ಹಣ್ಣು ಮತ್ತು ತರಕಾರಿಗಳನ್ನು ಖರೀದಿಸಿದ್ದಕ್ಕೆ ಗಣಕೀಕೃತ ಬಿಲ್ ಗಳನ್ನು ನೀಡಲು ಕ್ರಮವಹಿಸಲಾಗುತ್ತಿದೆ.<br>ಸಂಸ್ಥೆಯಲ್ಲಿ ಸದಸ್ಯ ರೈತರಿಂದ ಖರೀದಿಸಲಾದ ಪದಾರ್ಥಗಳ ಬಿಲ್ಲಿನ ಮೊತ್ತಗಳನ್ನು NEFT/RTGS ಮುಖೇನ ಸಂಬಂಧಪಟ್ಟವರಿಗೆ ಪಾವತಿಸಲಾಗುತ್ತಿದೆ. |
| ಆ) | ಹಾಪ್ ಕಾಮ್ಸ್ ಸುಧಾರಣೆಗಾಗಿ ಖಾಸಗಿ ಸಹಭಾಗಿತ್ವ ಮಾದರಿಯಲ್ಲಿ ಯೋಜನೆಗಳನ್ನು ಜಾರಿಗೆ ತರಲು ಸರ್ಕಾರ ಚಿಂತನೆ ನಡೆಸಿದೆಯೇ: (ವಿವರ ಒದಗಿಸುವುದು): | ಹೌದು.<br><br>ಪ್ರಸ್ತುತ ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯಿಂದ ಖಾಸಗಿ ಸಹಭಾಗಿತ್ವದಲ್ಲಿ ಬೆಂಗಳೂರು ಅಪಾರ್ಟ್ ಮೆಂಟ್ ಫೆಡರೇಷನ್ (BAF) ರವರೊಂದಿಗೆ ಒಡಂಬಡಿಕೆ ಮಾಡಿಕೊಂಡು ವ್ಯಾಪಾರ /ವಹಿವಾಟು ವಿಸ್ತರಿಸಲು ಕ್ರಮ ವಹಿಸಿದೆ. |

| | | |
|---|---|---|
| ಇ) | ರೈತರಿಂದ ನೇರವಾಗಿ ಹಣ್ಣು ಮತ್ತು ತರಕಾರಿಗಳನ್ನು ಖರೀದಿಸುವಾಗ ನ್ಯಾಯಯುತ ಬೆಲೆ ನೀಡಲು ಸರ್ಕಾರ ಯಾವ ನೀತಿಗಳನ್ನು ಅನುಸರಿಸುತ್ತಿದೆ. ರೈತರ ಹಿತಾಸಕ್ತಿ ಕಾಪಾಡಲು FRP ಮಾದರಿಯ ಬೆಲೆ ನಿಗದಿ ವ್ಯವಸ್ಥೆ ಜಾರಿಗೆ ತರಲಾಗಿದೆಯೇ, ಹಣ್ಣು & ತರಕಾರಿಗಳು ಹಾಳಾಗುವುದನ್ನು ತಡೆಯಲು ಶೀತಲ ಗೃಹಗಳ (cold storage ) ನಿರ್ಮಾಣ ಮತ್ತು ಸುಧಾರಿತ ಸಾರಿಗೆ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು); | 1. ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯು ಖರೀದಿ ಮತ್ತು ಮಾರಾಟ ವ್ಯವಸ್ಥೆಯನ್ನು ನಿಗಧಿಪಡಿಸಿರುವ ವ್ಯಾಪಾರ ನಿಯಮದಂತೆ ಪ್ರತಿ ದಿನ ಖರೀದಿ ಮತ್ತು ಮಾರಾಟ ದರಗಳನ್ನು ನಿಗಧಿಪಡಿಸಲಾಗುತ್ತಿದೆ.<br>2. ಬೆಂಗಳೂರು ಹಾಪ್ ಕಾಮ್ಸ್ ಸಂಸ್ಥೆಯಲ್ಲಿ ಪದಾರ್ಥಗಳನ್ನು ಶೇಖರಣೆ ಮಾಡುವ ಸಲುವಾಗಿ 40 ಟನ್ ಸಾಮರ್ಥ್ಯದ ಶೀಥಲ ಗೃಹವನ್ನು ಅಳವಡಿಸಿಕೊಳ್ಳಲಾಗಿದೆ.<br>3. ತೋಟಗಾರಿಕೆ ಇಲಾಖಾ ವತಿಯಿಂದ ಹಣ್ಣು & ತರಕಾರಿಗಳು ಹಾಳಾಗುವುದನ್ನು ತಡೆಯಲು ಶೀತಲ ಗೃಹಗಳ (cold storage) ನಿರ್ಮಾಣ ಮತ್ತು ಸುಧಾರಿತ ಸಾರಿಗೆ ವ್ಯವಸ್ಥೆ ಕಲ್ಪಿಸಲು ಕ್ರಮ ಕೈಗೊಂಡಿರುತ್ತದೆ. ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯಡಿ ತೋಟಗಾರಿಕೆ ಉತ್ಪನ್ನಗಳಾದ ಹಣ್ಣು ಮತ್ತು ತರಕಾರಿಗಳನ್ನು ಹಾಳಾಗದಂತೆ ತಡೆಯಲು ರೈತರಿಗೆ ಶೀಥಲಗೃಹ, ಫಾರ್ಮ್‌ಗೇಟ್ ಪ್ಯಾಕ್ ಹೌಸ್ ಹಾಗೂ ಈರುಳ್ಳಿ ಶೇಖರಣಾ ಘಟಕಗಳಿಗೆ ಸಹಾಯಧನ ನೀಡಲಾಗುತ್ತಿದ್ದು, ವಿವರ ಈ ಕೆಳಗಿನಂತಿರುತ್ತದೆ.<br><br>• ಶೀಥಲಗೃಹ Type-1 ಘಟಕದ ನಿರ್ಮಾಣಕ್ಕಾಗಿ ಪ್ರತಿ ಟನ್ ಗೆ ರೂ.9600/- ಘಟಕ ವೆಚ್ಚದ ಶೇ.35 ರಂತೆ, ರೂ.3360/- ರಂತೆ ಒಟ್ಟು 5000 ಮೆಟ್ರಿಕ್ ಟನ್ ಸಾಮರ್ಥ್ಯದ ಘಟಕಕ್ಕೆ ರೂ. 168.00 ಲಕ್ಷಗಳ ಗರಿಷ್ಟ ಸಹಾಯಧನ ನೀಡಲು ಅವಕಾಶವಿರುತ್ತದೆ.<br><br>• ಶೀಥಲಗೃಹ Type-2 ಘಟಕದ ನಿರ್ಮಾಣಕ್ಕಾಗಿ ಪ್ರತಿ ಟನ್ ಗೆ ರೂ.12000/- ಘಟಕ ವೆಚ್ಚದ ಶೇ.35 ರಂತೆ, ರೂ.4200/- ರಂತೆ ಒಟ್ಟು 5000 ಮೆಟ್ರಿಕ್ ಟನ್ ಸಾಮರ್ಥ್ಯದ ಘಟಕಕ್ಕೆ ರೂ. 210.00 ಲಕ್ಷಗಳ ಗರಿಷ್ಟ ಸಹಾಯಧನ ನೀಡಲು ಅವಕಾಶವಿರುತ್ತದೆ.<br><br>• ಫಾರ್ಮ್ ಗೇಟ್ ಪ್ಯಾಕ್ ಹೌಸ್ ಘಟಕ ನಿರ್ಮಾಣಕ್ಕಾಗಿ ರೂ. 4.80 ಲಕ್ಷಗಳ ಘಟಕ ವೆಚ್ಚಕ್ಕೆ ಶೇ. 50 ರಂತೆ ಗರಿಷ್ಟ ರೂ. 2.40 ಲಕ್ಷಗಳ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ.<br><br>• ಸಮಗ್ರ ಪ್ಯಾಕ್ ಹೌಸ್ ಘಟಕ ನಿರ್ಮಾಣಕ್ಕಾಗಿ ರೂ. 160.00 ಲಕ್ಷಗಳ ಘಟಕ ವೆಚ್ಚಕ್ಕೆ ಶೇ. 35 ರಂತೆ ಗರಿಷ್ಟ ರೂ. 56.00 ಲಕ್ಷಗಳ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ.<br><br>• ಈರುಳ್ಳಿ ಶೇಖರಣಾ ಘಟಕ ನಿರ್ಮಾಣಕ್ಕಾಗಿ 25 ಮೆಟ್ರಿಕ್ ಟನ್ ಶೇಕರಣಾ ಸಾರ್ಮಥ್ಯದ ಘಟಕಕ್ಕೆ ರೂ. 2.00 ಲಕ್ಷಗಳ ಘಟಕ ವೆಚ್ಚಕ್ಕೆ ಶೇ. 50 ರಂತೆ ಗರಿಷ್ಟ ರೂ. 1.00 ಲಕ್ಷಗಳ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ. |

| | | |
|---|---|---|
| | | • ಶೀಥಿಲ ವಾಹನ /Refrigerated Transport vehicle ಘಟಕಕ್ಕೆ 14 ಮೆಟ್ರಿಕ್ ಟನ್ ಸಾಗಿಸುವ ಸಾಮರ್ಥ್ಯದ ಘಟಕಕ್ಕೆ ರೂ. 31.00 ಲಕ್ಷಗಳ ಘಟಕ ವೆಚ್ಚಕ್ಕೆ ಶೇ. 35 ರಂತೆ ಗರಿಷ್ಟ ರೂ. 10.85 ಲಕ್ಷಗಳ ಸಹಾಯಧನವನ್ನು ನೀಡಲು ಅವಕಾಶವಿರುತ್ತದೆ.<br><br>• ಸಮಗ್ರ ತೋಟಗಾರಿಕೆ ಅಭಿವೃದ್ಧಿ ಮಿಷನ್ ಯೋಜನೆಯಡಿ ಆಸಕ್ತವುಳ್ಳ ರೈತರು/ಉದ್ದಿಮೆದಾರರು/ರೈತ ಉತ್ಪಾದಕ ಸಂಸ್ಥೆ (FPO)ಗಳಿಗೆ ಖಾಸಗಿ ಸಮಗ್ರ ಪ್ಯಾಕ್ ಹೌಸ್, ಕೋಲ್ಡ್ ಸ್ಟೋರೇಜ್ ನಿರ್ಮಿಸಲು ಉತ್ತೇಜಿಸಲಾಗುತ್ತಿದೆ. |
| | ಗ್ರಾಹಕರನ್ನು ಆಕರ್ಷಿಸಲು ಹಾಪ್ ಕಾಮ್ಸ್ ಮಳಿಗೆಗಳನ್ನು ಆಧುನೀಕರಿಸಲು ಮತ್ತು ರಾಜ್ಯಾಽದಾದ್ಯಂತ ಹೊಸ ಮಳಿಗೆಗಳನ್ನು ತೆರೆಯಲು ಸರ್ಕಾರದ ಯೋಜನೆಯೇನು; ಯೋಜನಾವಾರು ವಿವರ ಒದಗಿಸುವುದು? | ಕ್ರಮ ಸಂಖ್ಯೆ (ಅ) ರಲ್ಲಿ ವಿವರಗಳನ್ನು ಒದಗಿಸಿದೆ. |

**ಸಂಖ್ಯೆ: HORTI 560 HGM 2025**

P.S. - Kovin

**(ಎಸ್. ಎಸ್. ಮಲ್ಲಿಕಾರ್ಜುನ್)**
**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**